ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ
ನ್ಯಾಯಾಲಯ. ಕೆ.ಆರ್.ನಗರ.

ಸಿ.ಸಿ.ನಂ.190/2017

ಪಿರ್ಯಾದುದಾರರು: ಸಾಲಿಗ್ರಾಮ ಪೋಲೀಸರು

ವಿರುದ್ಧ

ಆರೋಪಿ: ವಸಂತಕುಮಾರ್ ಬಿ.ಕೆ., 22 ವರ್ಷ,
ಬಿನ್ ಕರೀಗೌಡ,
ಬೀಚನಹಳ್ಳಿಕೊಪ್ಪಲು ಗ್ರಾಮ,
ಕೆ.ಆರ್.ನಗರ ತಾಲ್ಲೂಕು.

ಆಪಾದನೆ

ದಿನಾಂಕ: 06-09-2016 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಸಾಲಿಗ್ರಾಮ ಪೋಲೀಸ್ ಠಾಣಾ ಸರಹದ್ದು ಈ ನ್ಯಾಯಾಲಯದ ವ್ಯಾಪ್ತಿಗೊಳಪಡುವ ಸಾಲಿಗ್ರಾಮ-ಭೇರ್ಯ-ಮಿರ್ಲೆ ರಸ್ತೆಯಲ್ಲಿ ಸಾಲಿಗ್ರಾಮ ಟೌನ್ ಕೆರೆ ಚಾನಲ್ ಗೇಟ್ ವಾಲ್ ಬಳಿ ಮೃತ ಧನುಷ್ ಬಿನ್ ರಘುರಾಮ್ ಈತನು ಆತನ ಬಾಬ್ತು ಕೆಎ-09 ಹೆಚ್.ಜೆ.2631 ನೇ ನಂಬರಿನ ಬಜಾಜ್ ಪಲ್ಸರ್ ದ್ವಿಚಕ್ರ ವಾಹನದಲ್ಲಿ ರಸ್ತೆಯ ಎಡಪಕ್ಕ ಹೋಗುತ್ತಿದ್ದಾಗ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-45 ಡಬ್ಲ್ಯು0260 ನೇ ನಂಬರಿನ ಹೀರೊ ಸ್ಪ್ಲೆಂಡರ್ ದ್ವಿಚಕ್ರ ವಾಹನವನ್ನು ಸಾಲಿಗ್ರಾಮದ ಕಡೆಯಿಂದ ಅತೀ ವೇಗವಾಗಿ ಮತ್ತು ನಿರ್ಲಕ್ಷತೆಯಿಂದ ಮಾನವೀಯ ಜೀವಕ್ಕೆ ಅಪಾಯವಾಗುವಂತೆ ಚಾಲನೆ ಮಾಡಿಕೊಂಡು ಬಂದು ಮೃತ ಧನುಷ್ ಈತನ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದ್ದು ನೀವು ಭಾ.ದಂ.ಸಂ. ಕಲಂ 279 ರಡಿ ಶಿಕ್ಷಾರ್ಹ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇದೆ.

ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತ ಪಡಿಸಿದ್ದರಿಂದ ಮೃತ ಧನುಷ್ ಈತನ ತಲೆಗೆ ಬಲಕಣ್ಣಿನ ಹತ್ತಿರ ರಕ್ತ ಗಾಯವಾಗಿ ಬಲದ ತೊಡೆ ಮೂಳೆ ಮುರಿದು ತೀವ್ರ ಸ್ವರೂಪದ ಗಾಯಗಳಾಗಿ ಆತನನ್ನು ಸಾಲಿಗ್ರಾಮ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದುಕೊಂಡು ಹೋಗುವಾಗ ದಾರಿ ಮಧ್ಯೆ ಮೈಸೂರು ಸಮೀಪ ರಾತ್ರಿ 8.20 ಗಂಟೆಗೆ ಮೃತನಾಗಿದ್ದು ನೀವು ಭಾ.ದಂ.ಸಂ. ಕಲಂ 304(ಎ)ರಡಿ ಶಿಕ್ಷಾರ್ಹ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇದೆ.

Vasanth

30/12/17

ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡುತ್ತೀರಿ.

ಪ್ರಶ್ನೆ1ಃ ನಿಮಗೆ ಈಗ ಓದಿ ಹೇಳಿದ ನಿಮ್ಮ ಮೇಲಿನ ಆರೋಪಗಳನ್ನು ಕೇಳಿಸಿಕೊಂಡಿರಾ? ತಿಳಿಯಿತೇ?

ಉತ್ತರ ಃ ತಿಳಿಯಿತು

ಪ್ರಶ್ನೆ2ಃ ಮೇಲ್ಕಂಡ ಆರೋಪಗಳನ್ನು ನೀವು ಒಪ್ಪಿಕೊಳ್ಳುತ್ತೀರೋ? ವಿಚಾರಣೆಯಾಗಬೇಕೋ?

ಉತ್ತರ ಃ ಇಲ್ಲ, ವಿಚಾರಣೆಯಾಗಬೇಕು.

30/12/19

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾಧಂ, ಕೆ.ಆರ್.ನಗರ.

ಕೆ.ಆರ್.ನಗರ,
ದಿನಾಂಕಃ 30-12-2019

Vasanth